ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಬಿಜಾಪುರದಲ್ಲಿ ಸೈಕಲ್ ಪಟುಗಳಿಗೆ ಪ್ರೋತ್ಸಾಹಿಸುವುದಕ್ಕೆ ಅವಶ್ಯಕವಿರುವ ವೆಲೋಡ್ರಮ್, ನಿರ್ಮಾಣ ಮಾಡುವಂತೆ ಈ ಹಿಂದಿನ ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು ಸದನದಲ್ಲಿ ಭರವಸೆ ನೀಡಿರುವುದು ನಿಜವಲ್ಲವೆ?

ಆ) ಸದರಿ ಭರವಸೆಯನ್ನು ಸರ್ಕಾರಿ ಜಾರಿಗೆ ತರದೇ ಇರಲು ಕಾರಣಗಳೇನು?

ಇ) ಹಾಗಿದ್ದಲ್ಲಿ ಎಂದಿನಿಂದ ನಿರ್ಮಾಣದ ಕಾರ್ಯವನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು):

ಅ) ಹೌದು.

ಆ) ರೂ. 14.21 ಲಕ್ಷಗಳ ಅಂದಾಜು ವೆಚ್ಚದಲ್ಲಿ ಬಿಜಾಪುರ ಜಿಲ್ಲಾ ಕ್ರೀಡಾಂಗಣದಲ್ಲಿಯೇ ಸೈಕಲಿಂಗ್ ಟ್ರಾಕ್ (ವಿಲೋಡ್ರಮ್) ಅಳವಡಿಸಲು ಉದ್ದೇಶಿಸಲಾಗಿದೆ. ನಿರೀಕ್ಷಿಸಿದ ಅನುದಾನ ಕೇಂದ್ರ ಸರ್ಕಾರದಿಂದ ಮಂಜೂರಾಗದ ಕಾರಣ ನಿರ್ಮಾಣಕಾರ್ಯ ಕೈಗೆತ್ತಿಕೊಂಡಿರುವುದಿಲ್ಲ.

ಇ) 1998-99ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಧನಸಹಾಯ ಯೋಜನೆ ಅಡಿಯಲ್ಲಿ ಹಣ ಮಂಜೂರಾಗುವ ನಿರೀಕ್ಷೆ ಇದೆ. ಈ ಹಣ ಪಡೆದ ಕೂಡಲೇ ಸೈಕ್ಲಿಂಗ್ ವೆಲೋಡ್ರಮ್ ಕೆಲಸ ಪ್ರಾರಂಭಿಸಲಾಗುವುದು.

ವಿಷಯ: ವಾಣಿಜ್ಯ ತೆರಿಗೆಯ ಬಾಕಿ ವಸೂಲಿ.

1209 (1669)

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ (ಬಾಗೇಪಲ್ಲಿ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) 1997-98ನೇ ಸಾಲಿನಲ್ಲಿ ಬಾಕಿ ಇರುವ ವಾಣಿಜ್ಯ ತೆರಿಗೆಯ ಮೊತ್ತವೆಷ್ಟು?

ಆ) ಈ ಬಾಕಿಯನ್ನು (ವಾಣಿಜ್ಯ ತೆರಿಗೆ) ವಸೂಲಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಇ) ನ್ಯಾಯಾಲಯ ಮುಂದೆ ಇರುವ ವಾಣಿಜ್ಯ ತೆರಿಗೆ ಪ್ರಕರಣಗಳ ಸಂಖ್ಯೆ ಎಷ್ಟು?

ಈ) ವಿಶೇಷ ತೆರಿಗೆ ನ್ಯಾಯ ಮಂಡಳಿಯನ್ನು ರಚಿಸುವ ಉದ್ದೇಶ ಸರ್ಕಾರಕ್ಕಿದೆಯೇ

ಉ) ಹಾಗಿದ್ದಲ್ಲಿ, ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು):

ಅ) ರೂ. 684.70 ಕೋಟಿಗಳು

ಆ) ಬಾಕಿ ವಸೂಲಾತಿಗೆ ವಾಣಿಜ್ಯ ತೆರಿಗೆ ಇಲಾಖೆಯ ಆಡಳಿತಕ್ಕೊಳಪಡುವ ಕಾಯ್ದೆಗಳಡಿಯಲ್ಲಿ ನಮೂದಿಸಿರುವ ಎಲ್ಲಾ ಕ್ರಮಗಳನ್ನು ಜರುಗಿಸಲಾಗಿದೆ.

ಇ) 5759.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

ವಿಷಯ: ಬಾಲ ಕಾರ್ಮಿಕರ ಪುನರ್ ವಸತಿ

12.10 (1670)

ಶ್ರೀ ಬಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಿವಿಧ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಬಾಲಕಾರ್ಮಿಕರ ಸಂಖ್ಯೆ ಎಷ್ಟು? (ಕೈಗಾರಿಕಾವಾರು)

ಆ) ಈ ಪದ್ಧತಿಯನ್ನು ರದ್ದುಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಇ) ಬಾಲಕಾರ್ಮಿಕರಿಗೆ ಪುನರ್‌ವಸತಿ ಒದಗಿಸುವ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)

ಶ್ರೀ ಬಿ.ಸತ್ಯನಾರಾಯಣ (ಕಾರ್ಮಿಕ ರಾಜ್ಯ ಸಚಿವರು):

ಅ) 96267.

ಸಂಸ್ಥೆವಾರು ಮಾಹಿತಿಯೂ ಸದ್ಯಕ್ಕೆ ಲಭ್ಯವಾಗಿಲ್ಲ. ಆದಾಗ್ಯೂ ಜಿಲ್ಲಾವಾರು ಮತ್ತು ಔದ್ಯಮಿಕವಾರು ಹಾಗೂ ಅಪಾಯಕಾರಿ ಮತ್ತು ಅಪಾಯಕಾರಿ ಅಲ್ಲದ ಅಂಕಿ